ಶ್ರೀ ಬಿ. ಇ. ರಾಮಯ್ಯ.— ಲಿಫ್ಟ್ ಇರಿಗೇಷನ್ ಸ್ಕೀಮಿಗೆ ಅದ್ಯತೆ ಕೊಡಬೇಕು ಎಂದು ಅಗಿಂದಾಗ್ಗೆ ಹೇಳುತ್ತಾ ಬಂದಿದ್ದೀರಿ. ಅಲ್ಲಿ ಅವಕಾಶ ಇದೆ, ಆದರೆ ಇವತ್ತಿನವರೆಗೆ ಮಾಡಿಕೊಟ್ಟಿಲ್ಲ ಏಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನೀರಿನ ಅಭಾವ ಇರತಕ್ಕ ಜಾಗಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳಿಗೆ ಅದ್ಯತೆ ಕೊಡಬೇಕು ಎಂದು ಹೇಳಿದ್ದೇವೆ, ಈಗಲೂ ಹೇಳುತ್ತಾ ಇದೇವೆ.

EARTHEN WORKS OF HIDKAL DAM

184. SRI KAGODU THIMMAPPA (Sagar).— Will the Minister of State for Major Irrigation be pleased to state.:—

(*a*) the name of the contractors to whom the earthen work of the Hidkal dam was entrusted and when ;

(*b*) when the contractors were required to complete the work according to the terms of the contract ;

(*c*) whether it is a fact that the said contractors have not completed the work in time ;

(*d*) whether it is a fact that instead of taking action as per law in respect of delay their contract have been cancelled ;

(*e*) whether it is a fact that the said contractors have asked for the refund of deposits made ;

(*f*) if so, the action taken by the Government in this behalf ?

SRI H. N. NANJE GOWDA.— (Minister of State for Major Irrigation.)

(*a*) (1) The work of Central Earth Dam from Ch. 6000 to 6670 was entrusted to M/s. Sri Shankaranarayana Construction Co., on 20th April 1971.

(2) The work of Central Earth Dam from Ch. 6670 to 7500 was entrused to Messrs. Naveen Mechanised construction Co., on 27th March 1971.

(3) The work of Right Bank Earth Dam from Ch. 11,100 to 14,700 was entrusted to M/s. Shankar Construction Co., on 19th November 1969 and from Ch. 10,000 to Ch. 11,100 to the same Agency on 19th December 1970.

(*b*) The due dates of completion as per agreement are as follows :—

1. Central Earth Dam from Ch. 6000 to 6670—
   19th April 1974.
   Central Earth Dam from Ch. 6670 to 7500—
   26th March 1974.

(SRI H. NANJEGOWDA)

3. Right Bank Earth Dam—

(*a*) Ch. 11,100 to 14,700—18th May 1972.
(*b*) Ch. 10,000 to Ch. 11,000—18th June 1973.
(*c*) Yes.
(*d*) The queation of finalising the contract is under examination.
(*e*) Yes.
(*f*) The matter is under consideration of Government.

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ " ಸಿ " ಗೆ ಉತ್ತರವಾಗಿ " ಎಸ್ " ಎಂದು ಹೇಳಿದ್ದೀರಿ. ಹಾಗಿದ್ದರೆ ಕೆಲಸ ಸಕಾಲದಲ್ಲಿ ಪೂರೈಸದೆ ಹೋದಾಗ ಕೆಲಸವನ್ನು ರದ್ದು ಮಾಡತಕ್ಕ ಕಾಲದಲ್ಲಿ ತಾವು ಏನು ಕ್ರಮ ಕೈಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.— ಸದರಿ ಕಾಂಟ್ರಾಕ್ಟ ಬಗ್ಗೆ ಅಂತಿಮವಾಗಿ ತೀರ್ಮಾನ ತೆಗೆದ ಕೊಳ್ಳದೇ ಅದರ ಬಗ್ಗೆ ಇನ್ನೂ ಪರಿಶೀಲನೆ ಮಾಡಂತ್ತಿದ್ದೇವೆಂದು ಹೇಳಿದ್ದಾರೆ. ಅದುಮುಂಗಿದ ನಂತರ ಕಾನೂನು ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

ಶ್ರೀ ಕಾಗೊಡುತಿಮ್ಮಪ್ಪ.— ಈ ರೀತಿ ತಮಗೆ ಸಕಾಲದಲ್ಲಿ ಕೆಲಸ ಪೂರೈಸಿಲ್ಲ ಎಂದು ಗೊತ್ತಾದ ಮೇಲೆ ಆ ಕೆಲಸವನ್ನು ಬೇರೆಯವರಿಗೆ ವಹಿಸಿಕೊಟ್ಟಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.— ಬೇರೆಯವರಿಗೆ ವಹಿಸಿಕೊಟ್ಟಿದ್ದೇವೆ.

ಶ್ರೀ ಕಾಗೊಡು ತಿಮಪ್ಪ.— ಕಂಟ್ರಾಕ್ಟರ್ ಪೂರೈಸದೆಇರುವ ಕೆಲಸವನ್ನು ಬೇರೆಯವರಿಗೆ ವಹಿಸಿ ಕೊಡುವುದರಿಂದ ಸರ್ಕಾರಕ್ಕೆ ಏಷ್ಟು ಲುಕ್ಸಾನು ಆಗಿದೆ. ?

ಶ್ರೀ ಎಚ್. ಎನ್. ನಂಜೇಗೌಡ.— ಅದು ಪರಿಶೀಲನೆಯ ಘಟ್ಟದಲ್ಲಿರುವುದರಿಂದ ಈಗ ನಾನು ಯಾವ ಅಂಕಿಅಂಶ ಕೊಡುವ ಸ್ಥಿತಿಯಲ್ಲಿಲ್ಲ

ಶ್ರೀ ಎಂ. ಎಸ್. ಕೃಷ್ಣನ್— ಡಿಪಾಸಿಟ್ ರೀಫಂಡ್ ಮಾಡುವ ಬಗೆ ಕೇಳಿದ್ದಾರೆ, ಎಂಬ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು " ಎಸ್ " ಎಂದು ಹೇಳಿದ್ದಾರೆ. ಡಿಪಾಸಿಟ್ ರೀಫಂಡ್ ಮಾಡಬೇಕಾದ ಬಗ್ಗೆ ತೀರ್ಮಾನ ಕೈಗೊಂಡಿದ್ದೀರಾ ?

ಶ್ರೀ ಎಚ್.ಎನ್. ನಂಜೇಗೌಡ.— ಕ್ಲೈಮ್ಸ್ ಯಾರದರೂ ಹಾಕಿದ್ದರೆ ಅದಕ್ಕೆ ಕ್ಲೈಮ್ಸ್ ಕಮಿಟಿ ಇರುತ್ತದೆ. ಅದರಲ್ಲಿ 'ಲಾ' ಡಿಪಾರ್ಟಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್ ಪಿ. ಡಬ್ಲ್ಯು. ಡಿ. ಇಲಾಖೆ ಯವರು ಇರುತ್ತಾರೆ. ಎಲ್ಲಾ ತಾಂತ್ರಿಕ ಜ್ಞಾನವುಳ್ಳ ಸದಸ್ಯರು ಇರುತ್ತಾರೆ. ಅವರು ನೋಡಿಯಾದ ಮೇಲೆ ನಮ್ಮ ಹತ್ತಿರ ಬರುತ್ತದೆ. ಆಗ ಕಾನೂನು ಪ್ರಕಾರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿಟಿ. ಗುಡ್ಡಪ್ಪಾಯ್ಯ.— ಹಿಡಿಕಲ್ ಡ್ಯಾಂಕಿನಲ್ಲಿ ಸಿಮೆಂಟ್ ಎಷ್ಟು ಕಳವು ಆಗಿದೆ ಎನ್ನುವುದು ತಮ್ಮ ಗಮನಕೆ ಬಂದಿದೆಯೋ, ಬಂದಿದ್ದರೆ ಅದು ಕಳವು ಆಗದಹಾಗೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಅದು ಹೊಸ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಕೆಲಸ ತೆಗೆದುಕೊಂಡ ಕಾಲದಲ್ಲಿ ಯಾವದರ ನಿಷ್ಕರ್ಷೆ ಮಾಡಿದ್ದಿರೋ, ಅದೇ ದರವನ್ನು ಈಗ ಹೊಸದಾಗಿ ಕೆಲಸ ವಹಿಸಿಕೊಟ್ಟವರಿಗೆ ನಿಗದಿ ಮಾಡಿಕೊಟ್ಟಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಕೆಲಸಗಳನ್ನು ಕೊಡುವಾಗ ಸ್ಪೆಸಿಫಿಕೇಷನ್ ಚೇಂಜ್ ಮಾಡುತ್ತೇವೆ. ವಾಲ್ಯೂಂ ಆಫ್ ವರ್ಕ್ ವ್ಯತ್ಯಾಸ ಇರುತ್ತದೆ. ಆಯಾ ವರ್ಷ ಟೆಂಡರ್ ಹಾಕಬೇಕಾದರೆ ಆಯಾ ವರ್ಷದ ಕರೆಂಟ್ ಷೆಡ್ಯೂಲ್ ಆಫ್ ರೇಟ್ ಏನು ಇರುತ್ತದೆ ಅದರ ಮೇಲೆ ಎಸ್ಟಿಮೇಟ್ ಪ್ರಿಪೇರ್ ಮಾಡಿ ಟೆಂಡರನ್ನು ಕರೆಯಲಾಗುತ್ತದೆ. ಅದರ ಮೇಲೆ ಟೆಂಡರ್ ಹಾಕಿದವರಲ್ಲಿ ಯಾರು ಕಡಿಮೆ ಟೆಂಡರ್ ಕೊಡುತ್ತಾರೆ ಅವರಿಗೆ ಕೆಲಸವನ್ನು ಕೊಡುವ ಪದ್ಧತಿ ಇದೆ.